# ಕಷ್ಟಕ್ಕೆ ಎಷ್ಟು ಮುಖ?

ನಮ್ಮ ದೈನಂದಿನ ಲೋಕಾಭಿರಾಮ ಸಂಭಾಷಣೆಯಲ್ಲಿ ಕೆಲವು ಪದಗಳು ಮತ್ತೆ ಮತ್ತೆ ಬಳಕೆಯಾಗುತ್ತವೆ. ಅಂಥ ಪದಗಳಲ್ಲಿ 'ಕಷ್ಟ'ವೆಂಬುದೂ ಒಂದು. ಏಕೆಂದರೆ ಕಷ್ಟದ ಅನುಭವ ಸಾರ್ವತ್ರಿಕವಾದುದು. ಆಗರ್ಭ ಶ್ರೀಮಂತನಿಂದ ಹಿಡಿದು ಬೀದಿ ಭಿಕಾರಿಯವರೆಗೂ ಕಷ್ಟ ಕೈಚಾಚಿಕೊಂಡಿರುತ್ತದೆ ಎಂಬುದು ಎಲ್ಲ ಕಾಲಕ್ಕೂ ಸತ್ಯ. ಶ್ರೀಮಂತನ ಕಷ್ಟ, ಮಧ್ಯಮ ವರ್ಗದವನ ಕಷ್ಟ, ಸಾಮಾನ್ಯನ ಕಷ್ಟ– ಎಂದೆಲ್ಲಾ ನಾವು ವಿಭಜನೆ ಮಾಡುವುದು ವ್ಯಕ್ತಿಯ ಆರ್ಥಿಕ ಮಟ್ಟದ ಆಧಾರದಿಂದ. ಆದರೆ ಬಡತನ, ಶ್ರೀಮಂತಿಕೆಗಳ ಚೌಕಟ್ಟನ್ನೂ ಮೀರಿ ಎಲ್ಲರನ್ನೂ ಸಮಾನವಾಗಿ ಕಾಡುವ ಕಷ್ಟಗಳೂ ಇವೆಯಲ್ಲವೆ? ವ್ಯಕ್ತಿಯ ಆರ್ಥಿಕ ಕಾರಣಗಳಿಂದ ಮೂಡಿಬರುವ ಕಷ್ಟಗಳಲ್ಲಿ ಪ್ರಮಾಣ ವ್ಯತ್ಯಾಸ, ಸ್ತರ ವ್ಯತ್ಯಾಸಗಳಿರಬಹುದು. ಆದರೆ ಕಾಯಿಲೆ, ಅಪಘಾತ, ಅಪಮಾನ, ಸಾವು ಮುಂತಾದವುಗಳಿಂದ ಉದ್ಭವಿಸುವ ಕಷ್ಟಗಳಲ್ಲಿ ಇಂಥ ವ್ಯತ್ಯಾಸಗಳಿಲ್ಲ.

ಕಷ್ಟವೆಂಬುದೊಂದು ಬಹುರೂಪಿ. ಅದರ ರೂಪ ವೈವಿಧ್ಯವನ್ನು ಗಮನಿಸಿದರೆ ನಿಜಕ್ಕೂ ಅಚ್ಚರಿಯಾಗುತ್ತದೆ. ನಮ್ಮ ವ್ಯಕ್ತಿಗತ ದೌರ್ಬಲ್ಯಗಳಿಂದ ಒದಗಿ ಬರುವಂತ ಕಷ್ಟಗಳು ಕೆಲವು. ಅವನ್ನು ಸ್ವಯಂಕೃತಾಪರಾಧ ಜನ್ಯ ಕಷ್ಟಗಳೆಂದು ಹೆಸರಿಸಬಹುದು. ಅಂಥವನ್ನು ವಿವೇಕದಿಂದಲೋ, ಸಂಕಲ್ಪ ಶಕ್ತಿಯಿಂದಲೋ ಪ್ರಯತ್ನ ಪೂರ್ವಕವಾಗಿ ನಿವಾರಿಸಿಕೊಳ್ಳಲು ಸಾಧ್ಯ. ಇನ್ನು ಕೆಲವು ಕಷ್ಟಗಳು ಏನೆಲ್ಲ ಪ್ರಯತ್ನಗಳನ್ನೂ ಮೀರಿ ನಮ್ಮ ಮೇಲೆ ದಾಳಿಮಾಡುತ್ತವೆ; ಕೆಲವಂತೂ ಅನಿರೀಕ್ಷಿತವಾಗಿ ಎದುರಾಗಿ, ಯಾವ ಮುನ್ನೆಚ್ಚರಿಕೆಗೂ ಅವಕಾಶಕೊಡದೆ ನಮ್ಮನ್ನು ಕಂಗೆಡಿಸುತ್ತವೆ. ಹೀಗೆ ಕಷ್ಟದ ಮುಖಗಳು ಒಂದೆರಡಲ್ಲ, ನೂರಾರು! ಸುಖ ಎಂಬುದರಲ್ಲಿ ಈ ಬಗೆಯ ವೈವಿಧ್ಯ ಕಡಿಮೆ ಎನ್ನಬಹುದು. 'ಸುಖೀ ಸಂಸಾರಗಳೆಲ್ಲವೂ ಒಂದೇ ರೀತಿ; ಆದರೆ ಅಸುಖೀ ಸಂಸಾರಗಳಲ್ಲಿ ಒಂದೊಂದಕ್ಕೂ ಒಂದೊಂದು ಸ್ವರೂಪ' ಎಂಬರ್ಥ ಬರುವ ಹೇಳಿಕೆಯೇ ಟಾಲ್‌ಸ್ಟಾಯ್ ರಚಿಸಿದ 'ಅನ್ನಾಕೆರಿನೀನಾ' ಕಾದಂಬರಿಯ ಮೊದಲ ವಾಕ್ಯವಾಗಿರುವುದನ್ನು ನೆನಪಿಸಿಕೊಳ್ಳಬಹುದು.

ಮನುಷ್ಯ ಎದುರಿಸುವ ಕೆಲವು ಕಷ್ಟಗಳಿಗೆ ದೈಹಿಕ ಕಾರಣಗಳಿದ್ದರೆ, ಇನ್ನು ಕೆಲವಕ್ಕೆ ಮಾನಸಿಕ ಕಾರಣಗಳಿರುತ್ತವೆ. ಅಂಗವೈಕಲ್ಯ, ಕಾಯಿಲೆ, ಅಪಘಾತ ಮುಂತಾದವುಗಳು ದೈಹಿಕ ಕಷ್ಟಗಳನ್ನು ಹುಟ್ಟುಹಾಕಿದರೆ, ಕೌಟುಂಬಿಕ ವಿರಸ, ಪ್ರಣಯ ಭಂಗ, ಅವಮಾನ, ಆರ್ಥಿಕ ಅಡಚಣೆ, ಶಿಕ್ಷಣದಲ್ಲಿ, ಉದ್ಯೋಗದಲ್ಲಿ ಅಪಯಶಸ್ಸು, ವ್ಯವಹಾರದಲ್ಲಿ ಸೋಲು– ಇಂಥ ಅನೇಕ ಕಾರಣಗಳು ಮಾನಸಿಕ ಕಷ್ಟಗಳಿಗೆ ಎಡೆಮಾಡಿಕೊಡುತ್ತವೆ. ಮನುಷ್ಯ ಮನೋದೇಹಿಯಾಗಿರುವುದರಿಂದ ಮಾನಸಿಕ ಕಷ್ಟಗಳು ದೇಹದ ಮೇಲೂ; ದೈಹಿಕ ಕಷ್ಟಗಳು ಮನಸ್ಸಿನ ಮೇಲೂ ಪ್ರಭಾವ ಬೀರುವುದು ಅನಿವಾರ್ಯ. ಇನ್ನು ಅಚಾನಕವಾಗಿ ಬಂದೆರಗುವ ಕಷ್ಟಗಳಿಗೆ ಕಾರಣಗಳನ್ನು ಊಹಿಸುವುದೇ ಅಸಾಧ್ಯ. ಸಾಧಾರಣವಾಗಿ ಅಂಥವನ್ನು ವಿಧಿ ಅಥವಾ ಹಣೆಬರಹಗಳಿಗೆ ಆರೋಪಿಸಿ ಸಮಾಧಾನ ಪಡೆಯಲು ಪ್ರಯತ್ನಿಸುತ್ತೇವೆ. ಭರ್ತೃಹರಿಯ ನೀತಿಶತಕದಲ್ಲಿನ ಒಂದು ಶ್ಲೋಕ ಇದನ್ನೇ ಹೇಳುತ್ತದೆ: ಒಬ್ಬ ಬೋಳುತಲೆಯ ಮನುಷ್ಯ ಸುಡುಬಿಸಿಲನ್ನು ಸಹಿಸಿಕೊಳ್ಳಲಾರದೇ, ಒಂದು ತಾಳೆ ಮರದ ಕೆಳಗೆ ನೆರಳನ್ನು ಆಶ್ರಯಿಸಿ ನಿಂತಿದ್ದನಂತೆ. ಆ ಕ್ಷಣದಲ್ಲಿಯೇ ಆ ತಾಳೆ ಮರದಿಂದ ಒಂದು ದೊಡ್ಡ ಹಣ್ಣು ದೊಪ್ಪೆಂದು ಅವನ ತಲೆ ಮೇಲೇ ತೊಟ್ಟು ಕಳಚಿ ಬೀಳಬೇಕೇ! ಪರಿಣಾಮವಾಗಿ ಆತನ ತಲೆ ಒಡೆದು ಹೋಯಿತಂತೆ. ಈ ಸಂದರ್ಭವನ್ನು ಮುಕ್ತಾಯಗೊಳಿಸುತ್ತಾ ಭರ್ತೃಹರಿ 'ಪ್ರಾಯೋ ಗಚ್ಛತಿ ಯತ್ರ ದೈವಹತಕಸ್ತತ್ರೈವ ಯಾಂತ್ಯಾ ಪದಃ' (ದೈವ ಯಾರಿಗೆ ಪ್ರತಿಕೂಲವಾಗಿದೆಯೋ, ಅಂಥವನು ಎಲ್ಲಿಗೆ ಹೋದರೂ ಆಪತ್ತುಗಳು ಅವನ ಬೆನ್ನಟ್ಟಿ ಅಲ್ಲಿಗೇ ಬರುತ್ತವೆ) ಎಂದು ಷರಾ ಬರೆಯುತ್ತಾನೆ.

ಒಟ್ಟಿನಲ್ಲಿ ಕಷ್ಟಗಳು ಮನುಷ್ಯನ ಪಾಲಿಗೆ ಯಾತನೆ, ಖಿನ್ನತೆ, ನಿರಾಶೆ, ನಿರುತ್ಸಾಹ ಮುಂತಾದವುಗಳನ್ನು ಹೊತ್ತು ತರುತ್ತವೆ; ಜೀವನೋತ್ಸಾಹವನ್ನು ಕುಗ್ಗಿಸುತ್ತವೆ. ಆದರೆ ಕಷ್ಟಗಳನ್ನು ಎದುರಿಸಿ, ಸಹಿಸಿ, ಅವುಗಳ ವಿರುದ್ಧ ಹೋರಾಡಿ, ತಮ್ಮ ದೈಹಿಕ ಮಾನಸಿಕ ಚೈತನ್ಯವನ್ನು ಉಳಿಸಿಕೊಂಡು, ಬೆಳಸಿಕೊಂಡು ಬದುಕಬಲ್ಲ ಧೀರರೂ ಇರುತ್ತಾರೆಂಬುದನ್ನು ಮರೆಯಬಾರದಲ್ಲವೆ? 'Peril is the element in which power is developed' ಎಂಬ ಹೇಳಿಕೆ ಇದನ್ನೇ ಸಮರ್ಥಿಸುತ್ತದೆ. ಬಸವಣ್ಣನವರು ಮರ್ತ್ಯಲೋಕವನ್ನು 'ಕರ್ತಾರನ ಕಮ್ಮಟ'ವೆಂದು ಕರೆದಿದ್ದಾರೆ. ಇಲ್ಲಿ ಕಮ್ಮಟವೆಂದರೆ 'ಟಂಕಸಾಲೆ.' ಈ ಭೂಮಿಯೆಂಬ ಟಂಕಸಾಲೆಯಲ್ಲಿ ಕಷ್ಟಗಳ ಉರಿಯಲ್ಲಿ ಭಗವಂತ ಮನುಷ್ಯನನ್ನು ಕಾಯಿಸಿ, ಬಡಿದು, ಕುಟ್ಟಿ, ನಾಣ್ಯಗಳನ್ನಾಗಿ ಮಾಡಲು ಪ್ರಯತ್ನಿಸುತ್ತಾನೆ. ಹಾಗೆ ತಯಾರಾದ ನಾಣ್ಯಗಳು ಇಹ ಮತ್ತು ಪರ ಎರಡರಲ್ಲೂ ಚಲಾವಣೆಗೆ ಅರ್ಹವಾಗುತ್ತವೆ. ಹೀಗೆ ಕಷ್ಟಗಳಿಂದಾಗಿ ಮನುಷ್ಯ ಈ ಲೋಕ ಮತ್ತು ಮುಂದಿನ ಲೋಕಗಳಲ್ಲಿ ಬದುಕುವ ಅರ್ಹತೆ ಗಳಿಸಿಕೊಳ್ಳುತ್ತಾನೆಂಬುದು ಬಸವಣ್ಣನವರ ನಿಲುವು. ಕವಿ ಕೀಟ್ಸ್ ಈ ಪ್ರಪಂಚವನ್ನು 'Vale of soul making' (ಆತ್ಮಗಳನ್ನು ರೂಪಿಸುವ ಒಂದು ಕಣಿವೆ) ಎಂದಿರುವುದೂ ಇದೇ ಅರ್ಥದಲ್ಲಿ!

■ **ವೈನತೇಯ**

## ಮಾತೇ ಮುತ್ತು

★ ಸಂಯಮವಿಲ್ಲದೆ, ಮೈಮುರಿದು ದುಡಿಯದೆ ಯಾವ ಮಹಾತ್ಕಾರ್ಯವೂ ಸಾಧ್ಯವಾಗದು.
–ಎಂ.ವಿಶ್ವೇಶ್ವರಯ್ಯ

★ ಅತಿಯಾದ ಮಮತೆ ಮಕ್ಕಳನ್ನು ಕೆಡಿಸಬಹುದು, ಆದರೆ ಪ್ರೀತಿ ಮತ್ತು ಶಿಸ್ತು ಮಕ್ಕಳ ಅಭಿವೃದ್ಧಿಗೆ ಪೂರಕವಾಗಿರುತ್ತದೆ.
–ಸ್ವಾಮಿ ರಾಮತೀರ್ಥರು

★ ಕೆಟ್ಟ ಅವಕಾಶಗಳು ದಿನದಲ್ಲಿ ನೂರು ಬಾರಿ ಬರುತ್ತವೆ. ಆದರೆ ಒಳ್ಳೆಯ ಅವಕಾಶಗಳು ವರುಷಕ್ಕೊಮ್ಮೆ ಬರಬಹುದು.
–ಶರಶ್ಚಂದ್ರ

★ ದುರಾಸೆ, ಸೋಮಾರಿಯಾಗಿ ಹೆಚ್ಚು ನಿದ್ರೆ ಮಾಡುವುದು, ಗಾಬರಿ, ಕ್ರೂರಸ್ವಭಾವ, ದೇವರಿಲ್ಲವೆಂಬ ಭಾವನೆ, ಆಚಾರವಿಲ್ಲದಿರುವಿಕೆ, ಬೇಡುವುದು, ತಪ್ಪು ಮಾಡುವುದು ತಮೋಗುಣದ ಲಕ್ಷಣ.
–ಮನುಸ್ಮೃತಿ

★ ನಾಳೆ ಏಳುತ್ತೇನೆ ಎಂದು ಮಲಗಿದ ವ್ಯಕ್ತಿಗೆ ಇದುವರೆಗೆ ಏಳಲು ಸಾಧ್ಯವಾಗಿಲ್ಲ.
–ಅಜ್ಞಾತ

★ ತರ್ಕ ಮಾಡುವ ಸಮಯದಲ್ಲಿ ಶಾಂತಚಿತ್ತದಿಂದಿರಬೇಕು. ಏಕೆಂದರೆ ಭಯ ಅಥವಾ ಆತುರ ತಪ್ಪು ಮಾಡುವಂತೆ ಮಾಡುತ್ತದೆ. ಅಲ್ಲದೆ ಸತ್ಯಕ್ಕೆ ಅಪಚಾರವಾಗುತ್ತದೆ.
–ಹರ್ಬರ್ಟ್

★ ಅತ್ಯಂತ ಕಷ್ಟದಲ್ಲಿರುವವನಿಗೆ ಒಂದು ಒಳ್ಳೆಯ ಸಾಂತ್ವನದ ಮಾತು ಶಕ್ತಿ ತುಂಬುವ ಟಾನಿಕ್ ಇದ್ದಂತೆ.
–ಶೇಕ್ಸ್ ಪಿಯರ್

★ ಚಲಿಸದೆ ನಿಂತವನನ್ನು ಮೂರ್ಖ ಎಂದು ಕೂಡಲೇ ಗುರುತಿಸಬಹುದು.
–ಪ್ರೇಮ್‌ಚಂದ್

★ ಸತ್ಯ ನಮ್ಮ ದಿನನಿತ್ಯದ ಬದುಕಿನಲ್ಲಿ ಮಾರ್ಗದರ್ಶಕ. ಇದರಿಂದ ಬೇರೆಯವರೊಂದಿಗೆ ಸಮಾನ ಸಂತೋಷ ಹಂಚಿಕೊಳ್ಳುವುದು ಸಾಧ್ಯ.
–ಖಲೀಲ್ ಗಿಬ್ರಾನ್

★ ಯಾರ ಮನೆಯಲ್ಲಿ ಗೃಹಿಣಿ ಇರುವುದಿಲ್ಲವೋ, ಅದು ಅರಣ್ಯಕ್ಕೆ ಸಮಾನವಾದುದು.
–ಮಹಾಭಾರತ

★ ಬುದ್ಧಿವಂತನಾದವನು ತನಗೆ ಸಿಕ್ಕಿದ ಅವಕಾಶವನ್ನು ತನ್ನ ಅದೃಷ್ಟರೇಖೆಯನ್ನಾಗಿ ಮಾಡಿಕೊಳ್ಳಬಲ್ಲ.
–ಥೇಮ್ಸ್

★ ಅಸಫಲ ವಿಚಾರಗಳಿಂದ ಸಫಲತೆ ಸಾಧ್ಯವಿಲ್ಲ. ಜಾಲಿ ಮರದಲ್ಲಿ ಗುಲಾಬಿ ಹೂವು ಅರಳಲು ಸಾಧ್ಯವೆ?
–ಬಂಕಿಮಚಂದ್ರ